**ಎಂ.ವಿ.ಸಿ.140/2025,      ಪಿ.ಡಬ್ಲೂ-1   ಹೆಸರುಃ ಮೀನಾಕ್ಷಿ**

**ದಿಃ14-01-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಪಿ.ಎನ್. ವಕೀಲರಿಂದಃ**

ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ. ನಾನು ಅಪಘಾತವಾದಾಗ ಹೊಳಲ್ಕೆರೆಯಲ್ಲಿದ್ದೆನು. ಅಪಘಾತದ ಕುರಿತು ನನ್ನ ಮೈದುನ ದೂರವಾಣಿ ಮೂಲಕ ತಿಳಿಸಿರುತ್ತಾರೆ. ವಿಚಾರ ತಿಳಿದ ನಂತರ ನಾನು ದಾವಣಗೆರೆಯ ಎಸ್.ಎಸ್.ಐ.ಎಂ.ಎಸ್ ಆಸ್ಪತ್ರೆಗೆ ಹೋಗಿರುತ್ತೇನೆ. ನನ್ನ ಮೃತ ಪತಿಯ ಕೈ, ಕಾಲು ಮತ್ತು ಸೊಂಟಕ್ಕೆ ಪೆಟ್ಟಾಗಿತ್ತು. ಅಪಘಾತದ ಸಮಯದಲ್ಲಿ ನನ್ನ ಮೃತ ಪತಿ ನಮಗೆ ಸೇರಿದ ಬೈಕಿನಲ್ಲಿ ಹೋಗುತ್ತಿದ್ದರು. ನನ್ನ ಮೃತ ಪತಿಗೆ ಚಾಲನಾ ಪರವಾನಗಿ ಇತ್ತು. ನಮ್ಮ ಬೈಕಿಗೆ ವಿಮೆ ಇತ್ತು. ಅವುಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಅಪಘಾತದಲ್ಲಿ ನನ್ನ ಮೃತ ಪತಿಯ ತಲೆಗೆ ತೀವ್ರ ಪೆಟ್ಟಾಗಿ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ನನ್ನ ಮೃತ ಪತಿ ಹೆಲ್ಮೆಟನ್ನು ಧರಿಸಿರಲಿಲ್ಲ ಎಂದರೆ ಗೊತ್ತಿಲ್ಲ. ನನ್ನ ಪತಿ ಬೈಕಿನಲ್ಲಿ ಹೋಗುತ್ತಿದ್ದಾಗ ಬಸ್ಸು ಬಂದು ಅಪಘಾತ ಮಾಡಿದೆ ಎಂಬ ವಿಚಾರ ಗೊತ್ತು. ಅಪಘಾತಪಡಿಸಿದ ಬಸ್ಸಿನ ಸಂಖ್ಯೆ ಗೊತ್ತಿಲ್ಲ. ಅಪಘಾತದ ಕುರಿತು ನನ್ನ ಮೈದುನ ದೂರನ್ನು ನೀಡಿರುತ್ತಾನೆ.

2. ಅಪಘಾತವನ್ನು ಯಾರು ನೋಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮೃತ ಪತಿಯೇ ಹೆಲ್ಮೆಟನ್ನು ಧರಿಸದೇ ಬಸ್ಸಿಗೆ ಡಿಕ್ಕಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತ ಬಸ್ಸಿನ ಚಾಲಕನ ತಪ್ಪಿನಿಂದ ಏರ್ಪಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮೃತ ಪತಿಯ ಅಂತ್ಯ ಸಂಸ್ಕಾರಕ್ಕಾಗಿ ರೂ. ಒಂದು ಲಕ್ಷ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮೃತ ಪತಿಗೆ ಓರ್ವ ತಮ್ಮ ಇದ್ದು, ಓರ್ವ ಅಕ್ಕ ಇದ್ದಾರೆ. ನನ್ನ ಮೃತ ಪತಿಗೆ ತಂದೆ ತಾಯಿ ಇಲ್ಲ. ನನ್ನ ಮೃತ ಪತಿ ಗ್ರಾನೈಟ್ ಕೆಲಸದಿಂದ ಮಾಸಿಕ ರೂ.50,000/- ಆದಾಯ ಗಳಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಅಂತ್ಯೋದಯ ಪಡಿತರ ಚೀಟಿ ಇದೆ. ಆರ್ಥಿಕವಾಗಿ ಕಡು ಬಡತನ ಹೊಂದಿರುವ ಕುಟುಂಬಕ್ಕೆ ಅಂತ್ಯೋದಯ ಪಡಿತರ ಚೀಟಿ ನೀಡುತ್ತಾರೆ ಎಂದರೆ ಸರಿ. ಅಪಘಾತದ ಕುರಿತು ನನಗೆ ಮಾಹಿತಿ ಇಲ್ಲದಿದ್ದಾಗ್ಯೂ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ